ಓ.ಎಸ್.ನಂ.60/2017
ಪಿಡಬ್ಲ್ಯೂ .2

ಪ್ರಮಾಣ ವಚನ ಬೋಧಿಸಿದ ದಿನಾಂಕಃ 10.02.2025.
ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.

**ಪಾಟೀ ಸವಾಲುಃ 2 ಮತ್ತು 3ನೇ ಪ್ರತಿವಾದಿಗಳ ಪರ ಶ್ರೀ ಎಸ್.ಎಂ. ವಕೀಲರಿಂದ**

ನನಗೆ ಕನ್ನಡ ಓದಲು–ಬರೆಯಲು ಬರುತ್ತದೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಕ್ಕೆ ರಾಮಾಂಜಿನೇಯಪ್ಪ ಮಾಹಿತಿ ಕೊಟ್ಟಿದ್ದಾರೆ. ಈ ಕೇಸನ್ನು ಭಾಗ್ಯಮ್ಮನವರು ರಾಮಾಂಜಿನೇಯಪ್ಪ ರವರ ವಿರುದ್ದ ಹಾಕಿದ್ದಾರೆ. ಈ ಕೇಸಿನಲ್ಲಿಯಾವ ಪರಿಹಾರ ಕೇಳಿದ್ದಾರೆ ಎಂದರೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ದಾವಾ ಆಸ್ತಿಯನ್ನು ಚಿನ್ನಮ್ಮನವರು ನನ್ನ ತಂದೆಯಾದ ಅಮೀರ್ ಸಾಬ್ ರವರಿಗೆ ಮಾರಾಟ ಮಾಡಿದ್ದರು, ನಂತರ ನನ್ನ ತಂದೆ ಸದರಿ ಚಿನ್ನಮ್ಮನವರಿಗೆ ವಾಪಸ್ಸು ಮಾಡಿರುತ್ತಾರೆ ಎಂದು ಹೇಳುತ್ತಾರೆ. ನನ್ನ ತಂದೆ ದಾವಾ ಆಸ್ತಿಯನ್ನು ಎರಡು ವರ್ಷಗಳ ಕಾಲ ಇಟ್ಟುಕೊಂಡಿದ್ದರು. ದಾವಾ ಆಸ್ತಿಯಲ್ಲಿ ನನ್ನ ತಂದೆ ಉಳುಮೆ ಮಾಡುತ್ತಿದ್ದರು. ನನ್ನ ತಂದೆಯು ವಾಪಸ್ಸು ಯಾವಾಗ ಚಿನ್ನಮ್ಮನವರಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡಿದ್ದಾರೆ ಎಂದರೆ ನೆನಪಿಲ್ಲ. ಸದರಿ ಕ್ರಯಪತ್ರವನ್ನು ನಾನು ನೋಡಿಲ್ಲ. ನನ್ನ ತಂದೆ ಖರೀದಿಸಿದ ಕ್ರಯಪತ್ರವನ್ನು ಹಾಗೂ ಮಾರಾಟ ಮಾಡಿದ ಕ್ರಯಪತ್ರವನ್ನು ನಾನು ನೋಡಿಲ್ಲ. ನನ್ನ ತಂದೆ ದಾವಾ ಆಸ್ತಿಯನ್ನು ಮಾರಾಟ ಮಾಡಿದ ನಂತರ ಅದಕ್ಕೆ ಸಂಬಂಧಿಸಿದ ಬೇರೆ ಕ್ರಯಪತ್ರಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ಸದರಿ ಕ್ರಯಪತ್ರಗಳನ್ನು ಹಾಜರುಪಡಿಸಲು ಏನಾದರೂ ತೊಂದರೆ ಇದೆಯಾ ಎಂದರೆ ಸಾಕ್ಷಿಯು ಸದರಿ ಪತ್ರಗಳು ನನ್ನ ವಶದಲ್ಲಿ ಇಲ್ಲ ಎಂದು ಹೇಳುತ್ತಾರೆ. ಯಾವ ರೀತಿ ನಿಮ್ಮ ತಂದೆಯು ಚಿನ್ನಮ್ಮನಿಗೆ ದಾವಾ ಆಸ್ತಿಯನ್ನು ಕೊಟ್ಟರು ಎಂದರೆ ಸಾಕ್ಷಿಯು ಚಿನ್ನಮ್ಮ ಬರೆದುಕೊಟ್ಟ ಕ್ರಯಪತ್ರವನ್ನು ಅವರಿಗೆ ವಾಪಸ್ಸು ಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ಸಾಕ್ಷಿಗೆ ದಾವಾ

ಆಸ್ತಿಯ ಇ.ಸಿ.ಯನ್ನು ತೋರಿಸಿ ಅದರಲ್ಲಿ ಅಮೀರ್ ಸಾಬ್ ರವರು ದಿನಾಂಕ:13.05.1974 ರಂದು ಬುಡ್ಡಮ್ಮನವರಿಗೆ ದಾವಾ ಆಸ್ತಿಯನ್ನು ರೂ.1,000/- ಗಳಿಗೆ ಮಾರಾಟ ಮಾಡಿದ್ದಾರೆ ಎಂದು ನಮೂದಾಗಿದೆ ಎಂದು ಕೇಳಿದಾಗ ಸಾಕ್ಷಿಯು ಹೌದು ಎಂದು ಉತ್ತರಿಸುತ್ತಾರೆ. ಸದರಿ ಇ.ಸಿ.ಯ ದೃಢೀಕೃತ ನಕಲನ್ನು ನಿ.ಡಿ.1 ಎಂದು ಗುರುತಿಸಲಾಯಿತು. ಸಾಕ್ಷಿಗೆ ದಿನಾಂಕ:13.05.1974 ರ ಕ್ರಯಪತ್ರದ ದಎಢೀಕೃತ ನಕಲನ್ನು ತೋರಿಸಿ ಅದರಲ್ಲಿ ದಾವಾ ಆಸ್ತಿಯನ್ನು ಅಮೀರ್ ಸಾಬ್ ರವರು ಸಂಜೀವಮ್ಮ ಉರೂಫ್ ಬುಡ್ಡಮ್ಮನವರಿಗೆ ಮಾರಾಟ ಮಾಡಿದ್ದಾರೆಂದು ಎಂದು ನಮೂದಾಗಿದೆ ಎಂದರೆ ಸಾಕ್ಷಿಯು ನನ್ನ ತಂದೆ ಚಿನ್ನಮ್ಮನವರಿಗೆ ಮಾರಾಟ ಮಾಡಿದ್ದಾರೆ ಎಂದು ಹೇಳುತ್ತಾರೆ. ದಿನಾಂಕ:13.05.1974 ರ ಕ್ರಯಪತ್ರದ ಆಧಾರದ ಮೇಲೆ ನನ್ನ ತಂದೆಯು ಬುಡ್ಡಮ್ಮನವರಿಗೆ ದಾವಾ ಆಸ್ತಿಯ ಸ್ವಾಧೀನವನ್ನು ಬಿಟ್ಟು ಕೊಟ್ಟರು ಎಂದರೆ ಸರಿಯಲ್ಲ. ಆದರೆ ಚಿನ್ನಮ್ಮನವರಿಗೆ ಬಿಟ್ಟು ಕೊಟ್ಟಿರುತ್ತಾರೆ. ಬುಡ್ಡಮ್ಮನವರು ಮೃತಪಟ್ಟ ನಂತರ ಅವರ ಮಕ್ಕಳಾದ 2 ಮತ್ತು 3ನೇ ಪ್ರತಿವಾದಿಯರು ದಾವಾ ಆಸ್ತಿಯ ಸ್ವಾಧೀನ ಹೊಂದಿ ಅನುಭವಿಸುತ್ತಿದ್ದಾರೆ ಎಂದರೆ ಸರಿಯಲ್ಲ. ನಿಮ್ಮ ತಂದೆ ಬುಡ್ಡಮ್ಮನವರಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡಿದ ನಂತರ ಯಾವ ಯಾವ ರೀತಿ ಖಾತೆ ಬದಲಾವಣೆಯಾಗಿದೆ ಎಂದು ಗೊತ್ತಾ? ಎಂದರೆ ಇಲ್ಲ.

ದಾವಾ ಆಸ್ತಿಯ ಚಕ್ಕುಬಂಧಿ ಗೊತ್ತು. ಪೂರ್ವಕ್ಕೆ - ಜಯಮ್ಮನವರ ಜಮೀನು, ಪಶ್ಚಿಮಕ್ಕೆ - ರಾಮಾಂಜಿನಿ ರವರ ಜಮೀನು, ಉತ್ತರಕ್ಕೆ - ಚಿಕ್ಕ ಪುಟ್ಟಪ್ಪನವರ ಜಮೀನು ಮತ್ತು ದಕ್ಷಿಣಕ್ಕೆ - ಸರ್ಕಾರಿ ಹಳ್ಳ. ದಾವಾ ಆಸ್ತಿಯ ಖಾತೆ-ಕಂದಾಯವು 2 ಮತ್ತು 3ನೇ ಪ್ರತಿವಾದಿಯರ ಹೆಸರಿನಲ್ಲಿ ಇದೆ ಹಾಗೂ ನಾನು ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ದಾವಾ ಆಸ್ತಿಯ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರೂ ಕೂಡ ಹಾಗೂ ನನ್ನ ತಂದೆಯು ದಾವಾ ಆಸ್ತಿಯನ್ನು ಬುಡ್ಡಮ್ಮನವರಿಗೆ ಮಾರಾಟ ಮಾಡಿದ ವಿಷಯ ಗೊತ್ತಿದ್ದರೂ ಕೂಡ

ಹಾಗೂ ಕಂದಾಯ ದಾಖಲೆಗಳು **2** ಮತ್ತು **3**ನೇ ಪ್ರತಿವಾದಿಗಳ ಹೆಸರಿಗೆ ಬದಲಾವಣೆಯಾಗಿರುವ ವಿಚಾರ ಗೊತ್ತಿದ್ದರೂ ಕೂಡ ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ**

(ನನ್ನ ಉಕ್ತಲೇಖಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ದೊಡ್ಡಬಳ್ಳಾಪುರ.